**CFC.R.P. 67** ಪ್ರಧಾನ **ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ.**

Form No.4(Civil)
Deposition

**ಎಸ್.ಸಿ. ನಂಃ 25/2017**

**ಪಿ.ಡಬ್ಲ್ಯೂ ನಂಃ 08**

**ಸಿಡಬ್ಲ್ಯೂ ನಂಃ 14**

**ಸಾಕ್ಷಿಯನ್ನು ದಿನಾಂಕಃ 04-12-2024**

**ರಂದು** ಪ್ರತಿಜ್ಞೆ ಬೋಧಿ**ಸಲಾಯಿತು.**

**ಸಾ**ಕ್ಷಿದಾರಳ **ಹೆಸರು** ಃ ಕರಿಯಮ್ಮ
ಗಂಡನ **ಹೆಸರು** ಃ ಶಿವಪ್ಪ ಚುಕ್ಕಾಡಿ
**ವಯಸ್ಸು** ಃ **48** ವ**ರ್ಷ**
**ಉದ್ಯೋಗ** ಃ ಕೂಲಿ ಕೆಲಸ
**ವಾಸ ಸ್ಥಳ** ಃ ವಣಗೇರಿ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಾ.

ಮೃತ ಮಂಜುಳಾ ನನ್ನ ಮಗಳು. ಚಾಸಾ **7** ಆಕೆಯ ಗಂಡ. ಅವರಿಗೆ ಇಬ್ಬರು ಮಕ್ಕಳು ಇದ್ದಾರೆ. ಘಟನೆಯಾದಾಗ ನಾನು ಮತ್ತು ನನ್ನ ಗಂಡ ಮಂಗಳೂರಿಗೆ ದುಡಿಯಲು ಹೋಗಿದ್ದೆವು. ದಿಃ **17-3-2016** ರಂದು ಚಾಸಾ **1** ರವರು ನನಗೆ ಫೋನು ಮಾಡಿ ಕುರುಬನಾಳ ಸೀಮಾದಲ್ಲಿ ಕಂದಕೂರು ರಸ್ತೆಯಲ್ಲಿ ಹೆಣ್ಣುಮಗಳ ಶವ ಬಿದ್ದಿದೆ ಎಂದು ತಿಳಿಸಿದರು. ನಮ್ಮ ಅಣ್ಣ ಮತ್ತು ಊರಿನವರು ಹೋಗಿ ಶವವನ್ನು ನೋಡಿ ಅದು ನಿಮ್ಮ ಮಗಳದ್ದೆ ಎಂದು ತಿಳಿಸಿದರು. ದಿಃ **18-03-2016** ರಂದು ನಮ್ಮನ್ನು ಕುಷ್ಟಗಿ ಪೊಲೀಸ ಠಾಣೆಗೆ ಕರೆಸಿದರು. ಒಂದು ಚಾಪೆ, ಸೀರೆ ತುಂಡು ಮತ್ತು ಫೊಟೋ ತೋರಿಸಿದರು. ಆ ಸೀರೆಯ ತುಂಡು ಆಶಾಕಾರ್ಯಕರ್ತರು ಹಾಕಿಕೊಳ್ಳುವ ಸೀರೆ ಆಗಿದ್ದು ಅದು ನಮ್ಮ ಮಗಳದ್ದೆ ಆಗಿತ್ತು ಎಂದು ತಿಳಿದುಬಂತು. ಫೊಟೋದಲ್ಲಿ ಕೊಡಿಹಾಳ ಶಿವಪ್ಪನ **2** ಫೊಟೋಗಳು, ನನ್ನ ಮಗಳ **4** ಫೊಟೋಗಳನ್ನು ತೋರಿಸಿದರು. ನನ್ನ ಮಗಳ ಶವವನ್ನು ನನಗೆ ತೋರಿಸಿರಲಿಲ್ಲ. ಆ ಹೊತ್ತಿಗಾಗಲೇ ಮಣ್ಣು ಮಾಡಲಾಗಿತ್ತು.

**2).** ದಿಃ **19-4-2016** ರಂದು ಅವರನ್ನು ಬಂಧಿಸಿದ ನಂತರ ನನ್ನನ್ನು ಪುನಃ ಪೊಲೀಸರು ಕರೆಸಿದ್ದರು. ನನಗೆ **1** ಫೋನು, **1** ಚಪ್ಪಲಿ ತೋರಿಸಿದ್ದು ಅವುಗಳು

ನನ್ನ ಮಗಳದ್ದಾಗಿದ್ದವು. ಅವುಗಳನ್ನು ಗುರುತಿಸಿ ಹೇಳಿಕೆ ಕೊಟ್ಟೆ. ಸದರಿ ಚಪ್ಪಲಿ ಮತ್ತು ಫೋನು ಈಗ ನನಗೆ ತೋರಿಸಿದ ಮುದ್ದೆಮಾಲು-1 ಮತ್ತು 2 ಆಗಿರುತ್ತವೆ. ಆರೋಪಿ ಗುಂಡಮ್ಮ ಆಶಾಕಾರ್ಯಕರ್ತೆ ಹುದ್ದೆಗೆ ಅರ್ಜಿ ಸಲ್ಲಿಸಿದ್ದಳು. ಆಕೆ ಬೇಡಾ ಎಂದು ನನ್ನ ಮಗಳು ಹೇಳಿದ ಕಾರಣ ನನ್ನ ಮಗಳನ್ನು ಗುಂಡಮ್ಮ ಸಾಯಿಸಿದಳು ಎಂದು ಪೊಲೀಸರು ನನಗೆ ತಿಳಿಸಿದರು. ನನ್ನ ಮಗಳನ್ನು ರೂಮಿಗೆ ಕರೆದುಕೊಂಡು ಹೋಗಿ ಕೂಲ್ ಡ್ರಿಂಕ್ಸ್‌ಗೆ ನಿದ್ದೆ ಮಾತ್ರೆ ಹಾಕಿ ಟವೆಲ್ಲನ್ನು ಕುತ್ತಿಗೆಗೆ ಬಿಗಿದು ಸಾಯಿಸಿರುತ್ತಾಳೆ ಎಂದು ಪೊಲೀಸರು ಹೇಳಿದರು. 4 ಮಂದಿ ಗಂಡಸರು ಮತ್ತು ಒಬ್ಬ ಮಹಿಳೆ ನನ್ನ ಮಗಳ ಶವವನ್ನು ಆಟೋದಲ್ಲಿ ತೆಗೆದುಕೊಂಡು ಹೋದರು ಎಂಬ ವಿಚಾರವನ್ನು ಪೊಲೀಸರು ನಮಗೆ ತಿಳಿಸಿದರು. ನಂತರ ಸಾಕ್ಷ್ಯ ಸಿಗಬಾರದು ಎಂಬ ಕಾರಣಕ್ಕಾಗಿ ನನ್ನ ಮಗಳ ಮೃತದೇಹವನ್ನು ಪೆಟ್ರೂಲ ಮತ್ತು ಸೀಮೆಎಣ್ಣೆ ಹಾಕಿ ಸುಟ್ಟಿರುತ್ತಾರೆ. ಆ 4 ಮಂದಿ ಗಂಡಸರು ಯಾರೆಂದು ಪೊಲೀಸರು ಹೆಸರು ಮತ್ತು ವಿವರಗಳನ್ನು ನಮಗೆ ತಿಳಿಸಿರಲಿಲ್ಲ. ರಾಜಕೀಯ ಒತ್ತಡದಿಂದ ಮುಚ್ಚಿ ಹಾಕಿದ್ದಾರೆ. ನನ್ನ ಮಗಳು ಕೆಲಸ ಮಾಡುವಾಗ ಬಹಳ ಕಿರಿಕಿರಿ ಇತ್ತು. ಡಾಃ ಶರಣಪ್ಪ ಮೇಟಿ ಎನ್ನುವವರು ನನ್ನ ಮಗಳಿಗೆ ಫೋನು ಮಾಡಿ ಹೆದರಿಸುತ್ತಿದ್ದರು.

<u>ಪಾಟೀ ಸವಾಲು : 1ನೇ ಆರೋಪಿಯ ಪರ ವಕೀಲರಿಂದ</u>

**3).** ಚಾಸಾ 1, ಚಾಸಾ 3, ಚಾಸಾ 8 ನಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ನನ್ನ ಅಳಿಯ ಒಕ್ಕಲುತನ ಮಾಡುತ್ತಿದ್ದ ಎಂದರೆ ಸರಿ. ನನ್ನ ಮಗಳು ಆಶಾಕಾರ್ಯಕರ್ತೆ ಆಗಿದ್ದ ಕಾರಣ ಗಂಡ-ಹೆಂಡತಿಯ ಮಧ್ಯ ಹೊಂದಾಣಿಕೆ ಇರಲಿಲ್ಲ ಎಂದರೆ ಸರಿಯಲ್ಲ. ಅವರ ಮಧ್ಯ ಹಲವಾರು ಬಾರಿ ಜಗಳ ಆಗಿದ್ದರಿಂದ ನನ್ನ ಮಗಳು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಳು ಎಂದರೆ ಸರಿಯಲ್ಲ. ಡಾಃ ಶರಣಪ್ಪ ಮೇಟಿ ಕಿರಿಕಿರಿ ಮಾಡುತ್ತಿದ್ದ ಕಾರಣ ನನ್ನ ಮಗಳು ಎಣ್ಣೆ ಕುಡಿದಿದ್ದಳು ಎಂದು ಸಾಕ್ಷಿದಾರರು ಮುಂದುವರಿದು ನುಡಿದಿರುತ್ತಾರೆ. ನಾವು ಸದರಿ ವೈದ್ಯರ ವಿರುದ್ಧ ದೂರು ಕೊಟ್ಟಿರಲಿಲ್ಲ.

4). ನನ್ನ ಮಗಳ ದೇಹದ ಮೇಲೆ ಸುಮಾರು 3 ತೊಲೆ ಬಂಗಾರ ಇತ್ತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿರಲಿಲ್ಲ ಹಾಗೂ ಡಾಃ ಶರಣಪ್ಪ ಮೇಟಿ ವಿಚಾರ ಮತ್ತು ನನ್ನ ಮಗಳ ಬಳಿ 3 ತೊಲೆ ಬಂಗಾರ ಇದ್ದ ವಿಚಾರ ಪೊಲೀಸರಿಗೆ ಹೇಳಿರಲಿಲ್ಲ. ಮೋಬೈಲ್  ಸ್ಯಾಮಸಂಗ ಕಂಪನಿಯದ್ದಾಗಿರುತ್ತದೆ. ಚಪ್ಪಲಿಯನ್ನು ನಾನೇ ನನ್ನ ಮಗಳಿಗೆ ಕೊಡಿಸಿದ್ದೆ. ಮಗಳು ಮತ್ತು ಆಕೆಯ ಗಂಡ ಜಗಳ ಮಾಡಿಕೊಂಡಿದ್ದರು ಆಕೆ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ ತಂಪು ಪಾನೀಯದಲ್ಲಿ ನಿದ್ರೆ ಮಾತ್ರೆ ಹಾಕಿರಲಿಲ್ಲ ಆದರೆ ಗುಂಡಮ್ಮ ಮತ್ತು 4 ಜನ ಸೇರಿಕೊಂಡು ನನ್ನ ಮಗಳ ಕುತ್ತಿಗೆ ಹಿಚುಕಿ ಸಾಯಿಸಿದ್ದಾರೆ ಹಾಗೂ ಆಕೆಯ ಮಾನಭಂಗ ಸಹಾ ಮಾಡಿದ್ದರು ಎಂದು ಸಾಕ್ಷಿದಾರರು ಮುಂದುವರಿದು ನುಡಿದಿರುತ್ತಾರೆ. ನನ್ನ ಮಗಳ ಮಾನಭಂಗ ಆಗಿದೆ ಎಂದು ನಾನು ಪೊಲೀಸರಿಗೆ ಹೇಳಿ ಬರೆಸಿರಲಿಲ್ಲ. ನಾನು 1ನೇ ಆರೋಪಿ ಗುಂಡಮ್ಮನ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : 2ನೇ ಆರೋಪಿಯ ಪರ ವಕೀಲರಿಂದ</u>

2ನೇ ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಏನೂ ಇರುವುದಿಲ್ಲಾ ಅಂತಾ ತಿಳಿಸಿದ್ದಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ